**ಪಿ ಡಬ್ಲೂ : 2**

ಸಾಕ್ಷಿಗೆ ದಿನಾಂಕಃ **20.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರರ ಪರಃ ಶ್ರೀ  ವಕೀಲರಿಂದ:**

ಮೃತ ಪರಶಿವ ನನ್ನ ತಂದೆ ಅಗಿರುತ್ತಾರೆ. ನಮ್ಮ ಗ್ರಾಮದ ಮಹೇಶ್ ಎಂಬುವವರು ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ನಂತರ ಮಂಡ್ಯದ ಅಸ್ಪತ್ರೆಯಲ್ಲಿ ನನ್ನ ತಂದೆಯನ್ನು ನೋಡಿರುತ್ತೇನೆ. ನಾನು ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ದಿನಾಂಕ 03.04.2024 ರಂದು ದಾಸದೊಡ್ಡಿ ಹತ್ತಿರ ಅಪಘಾತವಾಗಿರುತ್ತದೆ. ಮಳವಳ್ಳಿ -ಕೊಳ್ಳೇಗಾಲ ರಸ್ತೆಯಲ್ಲಿ ಅಪಘಾತವಾಗಿರುತ್ತದೆ. ನನ್ನ ತಂದೆಯು ಬೈಕಿನಲ್ಲಿ ಹೋಗುವಾಗ ಅಪಘಾತವಾಗಿರುತ್ತದೆ. ಆ ದಿನ ಬೈಕನ್ನು ಸ್ವಾಮಿ ಎಂಬುವವರು ಚಾಲನೆ ಮಾಡುತ್ತಿದ್ದರು. ಸದರಿ ಬೈಕಿನ ನೊಂದಣಿ ಸಂಖ್ಯೆ ಗೊತ್ತಿರುವುದಿಲ್ಲ. 1741 ಕೆ ಎಸ್ ಅರ್ ಟಿ ಸಿ ಬಸ್ಸಿನ ನೊಂದಣಿ ಸಂಖ್ಯೆ ಅಗಿರುತ್ತದೆ. ನನ್ನ ತಂದೆಯ ಶವವನ್ನು ಸಾಗಿಸಲು 50 ಸಾವಿರ ಮತ್ತು ಶವ ಸಂಸ್ಕಾರಕ್ಕೆ 2 ಲಕ್ಷ ರೂಪಾಯಿ ಖರ್ಚು ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2) ನನ್ನ ತಂದೆ ಅಪಘಾತ ಪೂರ್ವದಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಅಪಘಾತ ಕಾಲಕ್ಕೆ ನನ್ನ ತಂದೆಗೆ 59 ವರುಷ ವಯಸ್ಸು ಅಗಿತ್ತು. ಸದರಿ ಕಾಲಕ್ಕೆ ನನ್ನ ತಂದೆಗೆ 65 ಕ್ಕಿಂತ ಹೆಚ್ಚು ವಯಸ್ಸು ಅಗಿತ್ತು ಮತ್ತು ಅವರು ಯಾವುದೇ ವೃತ್ತಿ ಮಾಡದೇ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ನನ್ನನ್ನು ಸೇರಿದಂತೆ ಒಟ್ಟು 3 ಜನ ಮಕ್ಕಳು ಇರುತ್ತಾರೆ. ಮತ್ತೊಬ್ಬರು ನನ್ನ ತಂಗಿ ಸವಿತ ಮತ್ತು ಅಕ್ಕ ಸೌಮ್ಯ ಅಗಿರುತ್ತಾರೆ. ನಾನು ಮತ್ತು ನನ್ನ ಅಕ್ಕ ನಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿದ್ದು, ನನ್ನ ತಂಗಿ ಪತಿ ಮೃತರಾಗಿ ನಮ್ಮ ತವರು ಮನೆಯಲ್ಲಿ ವಾಸವಿರುತ್ತಾರೆ. ನನ್ನ ತಂದೆಯು ತಿಂಗಳಿಗೆ 30 ಸಾವಿರ ರೂಪಾಯಿ ಅದಾಯ ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿ ನ ಪರಿಹಾರ ಬರಲಿ ಎಂದು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ